ಓ ಎಸ್ ನಂಃ 209/2016

ಪಿ. ಡಬ್ಲ್ಯೂ ಃ 1

ದಿಃ 12.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಹುಟ್ಟಿದ ದಿನಾಂಕ ಗೊತ್ತಿಲ್ಲ. ನಮ್ಮ ತಂದೆಗೆ ಮೋಸ ಆಗಿದೆ ಎಂದು ದಾವೆ ಮಾಡಿದ್ದೇನೆ. ನಮ್ಮ ತಂದೆಗೆ ಆಸ್ತಿಯಲ್ಲಿ ಯಾವುದೆ ಭಾಗ ಕೊಟ್ಟಿಲ್ಲ. ಆಸ್ತಿಯಲ್ಲಿ ಭಾಗವನ್ನು ನಮ್ಮ ದೊಡ್ಡಪ್ಪ ಕೊಡಬೇಕಾಗಿತ್ತು. ಸಿ ಶೆಡ್ಯೂಲ್ ಬಗ್ಗೆ ಪಂಚಾಯಿತಿಯವರು ಕೊಟ್ಟ ದಾಖಲೆಗಳನ್ನು ಕೊಟ್ಟಿದ್ದೇನೆ. ಆ ಸ್ವತ್ತು ಮರಿಲಿಂಗಯ್ಯ ಬಿನ್ ಜೋಗಿ ಸಿದ್ದಯ್ಯ ಇವರ ಹೆಸರಿನಲ್ಲಿದೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಸಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಯಾವುದೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಿ ಶೆಡ್ಯೂಲ್ ಸ್ವತ್ತು ಈಗ ಗೋಪಿ, ಚಿಕ್ಕೇಗೌಡ ಮತ್ತು ಪ್ರೇಮಮ್ಮ ಇವರ ಹೆಸರಿನಲ್ಲಿದೆ. ಆ ಸ್ವತ್ತನ್ನು ನಮ್ಮ ತಂದೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ, ಆದರೆ ನಮ್ಮ ತಂದೆ ಯಾವುದೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಕ್ರಯಪತ್ರ ಅಥವಾ ಇ ಸಿ ಯನ್ನು ಪಡೆದು ನಾನು ಪರಿಶೀಲನೆ ಮಾಡಿಲ್ಲ. ಯಾವ ವರ್ಷದಲ್ಲಿ ಆ ಕ್ರಯಪತ್ರವಾಗಿದೆ ಎಂಬುವುದರ ಬಗ್ಗೆ ನಾನು ತಿಳಿದುಕೊಂಡಿಲ್ಲ.

ಮರಿಲಿಂಗಯ್ಯ ಇವರ ಹೆಂಡತಿ ಕೆಂಪಮ್ಮ ಮತ್ತು ಅವರ ಮಕ್ಕಳೆಲ್ಲರು ಸೇರಿ ಸಿ ಶೆಡ್ಯೂಲ್ ಸ್ವತ್ತನ್ನು 1967 ರಲ್ಲಿ ಚಿಕ್ಕೇಗೌಡ ಇವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 1967 ರಿಂದ ಮನೆಯಲ್ಲಿ ಚಿಕ್ಕೇಗೌಡರ ಕುಟುಂಬ ಸ್ವಾಧೀನದಲ್ಲಿದೆ ಎಂದರೆ ಸರಿ. ಈಗ ಆ ಮನೆಯಲ್ಲಿ ಪ್ರೇಮಮ್ಮ ಮತ್ತು ಗೋಪಿ ವಾಸವಾಗಿದ್ದಾರೆ ಎಂದರೆ ಸರಿ.ಪ್ರತಿವಾದಿಗಳಿಗೆ ಹೆದರಿಸಿ ಅವರಿಂದ ಹಣ ಪಡೆಯಬೇಕೆಂದು ನಮ್ಮ ತಂದೆ ಮತ್ತು ತಾತ , ಅಜ್ಜಿ ಎಲ್ಲರು ಸೇರಿ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ಸಹ ಒಂದು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಸಿ ಶೆಡ್ಯೂಲ್ ಸ್ವತ್ತಿನ ಖಾತೆ ಪ್ರೇಮ ಇವರ ಹೆಸರಿನಲ್ಲಿದೆ ಎಂದರೆ ಸರಿ. ಅದು ಗೋವಿಂದಯ್ಯ ರವರ ಹೆಸರಿನಲ್ಲಿತ್ತು ನಂತರ ಪ್ರೇಮ ಇವರ ಹೆಸರಿನಲ್ಲಿ ಬದಲಾವಣೆ

ಆಗಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1967 ರಲ್ಲಿ ನಮ್ಮ ಕುಟುಂಬದವರು ಸಿ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಿದ್ದರಿಂದ ಆ ಸ್ವತ್ತಿನಲ್ಲಿ ನಮಗೆ ಯಾವುದೆ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಆ ಸ್ವತ್ತಿಗೆ ಸಂಬಂಧಿಸಿದ ಯಾವುದೆ ದಾಖಲೆ

ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**